ಅವಕಾಶ ಲಭಿಸಿತು. ಹದಿನೆಂಟರ ಸಂಖ್ಯೆಯೊಂದಿಗೆ ಕೊಹ್ಲಿಗೆ ವಿಶೇಷ ನಂಟಿದೆ ಎನ್ನುವುದು ಮತ್ತೆ ಸಾಬೀತಾಯಿತು. ಕೊಹ್ಲಿ ಚೊಚ್ಚಲ ಐಪಿಎಲ್ ಆಡಿದ್ದಾಗ, ಮೊದಲ ಬಾರಿಗೆ ಸೀನಿಯರ್ ತಂಡದಲ್ಲಿ ಅವಕಾಶ ಗಿಟ್ಟಿಸಿದಾಗ ಮತ್ತು ಅವರ ಪೋಷಾಕು ಸಂಖ್ಯೆ 18 ಆಗಿತ್ತು ಎನ್ನುವುದು ವಿಶೇಷ.

'ಮಿಲಿಯನ್ ಡಾಲರ್ ಬೇಬಿ' ಎಂದೇ ಹೆಸರಾದ ಐಪಿಎಲ್ ಆರಂಭವಾದ ವರ್ಷದಿಂದಲೂ 'ಈ ಸಲ ಕಪ್ ನಮ್ದೇ' ಎನ್ನುವ ಘೋಷವಾಕ್ಯ ಆರ್‌ಸಿಬಿ ಅಭಿಮಾನಿಗಳಿಂದ ಮೊಳಗುತ್ತಿತ್ತು. ಟೂರ್ನಿ ಆರಂಭವಾದ ಮರುವರ್ಷವೇ (2009) ಬೆಂಗಳೂರಿನ ತಂಡ ಫೈನಲ್ ಪ್ರವೇಶಿಸಿ ಸೋಲು ಕಂಡಿತ್ತು. 2011ರಲ್ಲಿಯೂ ಇದು ಪುನರಾವರ್ತನೆ ಆಯಿತು. ಫೈನಲ್ ತನಕ ಬರುತ್ತಿರುವ ತಂಡ ಪ್ರಶಸ್ತಿ ಗೆಲ್ಲಬೇಕು ಎಂದು ಈ ಸಾಲುಗಳು ಉತ್ತುಂಗಕ್ಕೆ ತಲುಪಿದವು. ಆದರೆ ಕಪ್ ಮಾತ್ರ ಬರುತ್ತಿರಲಿಲ್ಲ. ಕ್ರಿಕೆಟ್ ದಿಗ್ಗಜರಾದ ರಾಹುಲ್ ದ್ರಾವಿಡ್, ಕೆವಿನ್ ಪೀಟರ್ಸನ್, ಅನಿಲ್ ಕುಂಬ್ಳೆ, ಡೇನಿಯಲ್ ವೆಟೋರಿ, ವಿರಾಟ್ ಕೊಹ್ಲಿ, ಶೇನ್ ವಾಟ್ಸನ್, ಫಾಪ್ ಡು ಪ್ಲೆಸಿಸ್ ತಂಡವನ್ನು ಮುನ್ನಡೆಸಿದರೂ 'ಈ ಸಲ ಕಪ್ ನಮ್ದೇ' ಎನ್ನುವುದು ಬಾಯಿಮಾತಿನಲ್ಲಿ ಮಾತ್ರ ಉಳಿಯುತ್ತಿತ್ತು. 2016ರಲ್ಲಿಯೂ ಫೈನಲ್ ತಲುಪಿ ನಿರಾಸೆ

## ಚಿನ್ನಸ್ವಾಮಿ ಅಂಗಳದಿಂದ ಮೋದಿ ಮೈದಾನದ ತನಕ

2008ರಲ್ಲಿ ಜಗತ್ತಿನ ಕ್ರೀಡಾಲೋಕದಲ್ಲಿ ಐಪಿಎಲ್ ಮಾದರಿಯ ಹೊಸ ಕ್ರಿಕೆಟ್ ಟೂರ್ನಿಗಳು ಸಂಚಲನ ಸೃಷ್ಟಿಸಿದ್ದವು. ಅದಕ್ಕೂ ಪೂರ್ವದಲ್ಲಿ ಟೆಸ್ಟ್ ಮತ್ತು ಏಕದಿನ ಮಾದರಿಯೇ ಖ್ಯಾತಿ ಪಡೆದಿತ್ತು. ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಟಿ–20 ಪಂದ್ಯಗಳು ನಡೆದಾಗಲೂ ಐಪಿಎಲ್‌ನಷ್ಟು ಖ್ಯಾತಿ ಸಿಗಲಿಲ್ಲ.

ಐಪಿಎಲ್ ಟೂರ್ನಿಯ ಚೊಚ್ಚಲ ಪಂದ್ಯವನ್ನು ಆಡಿದ್ದೇ ಆರ್‌ಸಿಬಿ ತಂಡ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2008ರ ಏಪ್ರಿಲ್ 18ರಂದು ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಆಡಿ ಸೋಲು ಕಂಡಿತ್ತು. ಅಂದು ಆರಂಭವಾದ ಆರ್‌ಸಿಬಿ ಪಯಣ ಹದಿನೆಂಟು ವರ್ಷಗಳ ತನಕ ಸಾಗಿ ಬಂದಿದೆ. ಇಷ್ಟೊಂದು ಅವಧಿಯಲ್ಲಿ ಬೆಂಗಳೂರಿನ ತಂಡ ಒಟ್ಟು 274 ಪಂದ್ಯಗಳನ್ನಾಡಿ 134ರಲ್ಲಿ ಗೆಲುವು ಪಡೆದಿದೆ. 133ರಲ್ಲಿ ಸೋಲು ಕಂಡಿದೆ. ಇನ್ನುಳಿದ ಏಳು ಪಂದ್ಯಗಳಲ್ಲಿ ಫಲಿತಾಂಶ ಬಂದಿಲ್ಲ.

ಐಪಿಎಲ್ ಮಾದರಿ ಅನುಕರಿಸಿಯೇ ಕೆರಿಬಿಯನ್ ಪ್ರೀಮಿಯರ್ ಲೀಗ್, ಬಾಂಗ್ಲಾದೇಶ, ಶ್ರೀಲಂಕಾ, ಆಸ್ಟ್ರೇಲಿಯಾ ಹೀಗೆ ಹಲವು ದೇಶಗಳಲ್ಲಿ ಲೀಗ್‌ಗಳು ನಡೆದವು. ಕ್ರಿಕೆಟ್ ಪ್ರಭಾವ ಕುಸ್ತಿ, ಕಬಡ್ಡಿ, ಬಾಕ್ಸಿಂಗ್, ಕೊಕ್ಕೊ ಕ್ರೀಡೆಗಳ ಮೇಲೂ ವ್ಯಾಪಿಸಿತು. ಭಾರತದಲ್ಲಿ ನಡೆಯುವ ಐಪಿಎಲ್‌ನಲ್ಲಿ ಕ್ರಿಕೆಟ್ ಆಡುವ ಎಲ್ಲ ರಾಷ್ಟ್ರಗಳ ಆಟಗಾರರು ಬಂದು ಪಾಲ್ಗೊಂಡಿದ್ದಾರೆ. ಆದರೆ ಬೇರೆ ದೇಶಗಳ ಲೀಗ್‌ನಲ್ಲಿ ಆಡಲು ಭಾರತದ ಆಟಗಾರರಿಗೆ ಜಗತ್ತಿನ ಶ್ರೀಮಂತ ಕ್ರಿಕೆಟ್ ಮಂಡಳಿ ಬಿಸಿಸಿಐ ಅವಕಾಶ ನೀಡಲಿಲ್ಲ.

ಹರಾಜಿನಲ್ಲಿ ಸಿಗುತ್ತಿದ್ದ ಕೋಟ್ಯಂತರ ರೂಪಾಯಿ, ಪಂಚತಾರಾ ಹೋಟೆಲ್‌ಗಳಲ್ಲಿ ವಾಸ, ಐಪಿಎಲ್‌ನಲ್ಲಿ ಸಿಕ್ಕ ಯಶಸ್ಸಿನಿಂದ ಲಭಿಸಿದ ಜಾಹೀರಾತು ಆದಾಯ ಈ ಎಲ್ಲ ಕಾರಣಕ್ಕಾಗಿಯೇ ಐಪಿಎಲ್ ತಾರಾ ವರ್ಚಸ್ಸು ಉಳಿಸಿಕೊಂಡಿತು. ಕ್ರಿಕೆಟ್ ತರಬೇತಿ ಆರಂಭಿಸಿದ ಬಾಲಕನೊಬ್ಬ ಮೊದಲು 'ದೇಶದ ತಂಡವನ್ನು ಪ್ರತಿನಿಧಿಸುವುದು ನನ್ನ ಗುರಿ' ಎನ್ನುತ್ತಿದ್ದ. ಬದಲಾದ ಕ್ರೇಜ್‌ನಲ್ಲಿ ಐಪಿಎಲ್ ಆಡುವುದು ಆದ್ಯತೆಯಾಯಿತು.

ಕ್ರಿಸ್ ಗೇಲ್ ಹಾಗೂ ಡಿವಿಲಿಯರ್ಸ್ ಬೆಂಗಳೂರಿನ ತಂಡದಲ್ಲಿದ್ದಾಗ ಅಪಾರ ಜನಬೆಂಬಲ ಲಭಿಸಿತು. ಕ್ರೀಡಾಂಗಣದ ಎಲ್ಲ ದಿಕ್ಕುಗಳಲ್ಲಿಯೂ ಬ್ಯಾಟ್ ಬೀಸಬಲ್ಲ 'ಮಿಸ್ಟರ್ 360' ಖ್ಯಾತಿಯ ಡಿವಿಲಿಯರ್ಸ್ ಮತ್ತು ಗೇಲ್ ಆಟ ಬೆಂಗಳೂರು ತಂಡಕ್ಕೆ ಹೊಸ ಅಭಿಮಾನಿಗಳನ್ನು ತಂದುಕೊಟ್ಟಿತು. ಹೀಗಾಗಿ ಈ ಇಬ್ಬರೂ ಆಟಗಾರರು ಐಪಿಎಲ್‌ನಿಂದ ಹೊರಗಿದ್ದರೂ ಆರ್‌ಸಿಬಿ ಚಾಂಪಿಯನ್ ಆದಾಗ ತಮ್ಮದೇ ಗೆಲುವು ಎನ್ನುವಂತೆ ಸಂಭ್ರಮಿಸಿದರು.

